# ‘ಇನ್ನು ಹೊರಟು ಬಿಡುವುದು ಲೇಸು’



ಕುರುಕುಲದ ರಾಜ ಯುಧಿಷ್ಠಿರ ಯಾದವರ ಕಲಹದ ಸುದ್ದಿ ಕೇಳಿದ. ಇನ್ನು ಹೊರಟು ಬಿಡುವುದು ಲೇಸು ಅಂದುಕೊಂಡ. ಅರ್ಜುನನಿಗೆ ‘ಕಾಲ ಎಲ್ಲವನ್ನೂ ಹದ ಮಾಡುತ್ತದೆ, ನಾನು ಕಾಲದ ಪಾಶ ತಿಳಕೊಂಡೆ, ನೀನೂ ಕಂಡುಕೋ’ ಎಂದ.

ಅರ್ಜುನ ಅಣ್ಣನ ಮಾತು ಆಲಿಸಿ, ‘ಕಾಲ, ಕಾಲ’ ಅಂದ. ಅರ್ಜುನನ ಮಾತನ್ನು ಅರಗಿಸಿಕೊಂಡು ಉಳಿದವರೂ ‘ಕಾಲ, ಕಾಲ’ ಎಂದರು.

ಸರಿ, ಇನ್ನು ಧರ್ಮವನ್ನು ಕಾಮಿಸಿ ಹೊರಡೋಣ ಎಂದುಕೊಂಡು ದುರ್ಯೋಧನನ ರಾಜ್ಯವನ್ನು ವೈಶ್ವಳ ಮಗ ಯುಯುತ್ಸುವಿಗೆ ಕೊಟ್ಟುಬಿಟ್ಟ. ತನ್ನ ರಾಜ್ಯದಲ್ಲಿ ರಾಜಕುಮಾರ ಪರೀಕ್ಷಿತನನ್ನು ಕೂರಿಸಿದ. ಉಮ್ಮಳಿಸುತ್ತಾ, ಸುಭದ್ರೆಗೆ ‘ಪರೀಕ್ಷಿತ ಹಸ್ತಿನಾಪುರಕ್ಕೆ ರಾಜ, ಇಂದ್ರಪ್ರಸ್ಥಕ್ಕೆ ವಜ್ರ ರಾಜ.



ನೆಲಗನ್ನಡ ಮಹಾಭಾರತ

ಮಹಾಭಾರತದೊಳಗಿಂದ ಒಂದಿಷ್ಟು

■ ಹಾಡುಪಾಡು ರಾಮು
ಕಲೆ: ಎಚ್.ಎಸ್. ಮೋನಪ್ಪ